ದಿನಾಂಕಃ 26.09.2025 ರಂದು ಸಾಕ್ಷಿದಾರರಿಗೆ ಪ್ರಮಾಣ ವಚನ ಬೋಧಿಸಲಾಯಿತು.

**ಮುಂದುವರೆದ ಪಾಟೀ ಸವಾಲು: ಪ್ರತಿವಾದಿ ಪರ ಶ್ರೀ ಎನ್.ಎಸ್.ಜೆ. ವಕೀಲರಿಂದ:**

ನಿಪಿ-21 ರ ದಾವೆಯಲ್ಲಿ ನನ್ನ ತಂದೆ ಯಾವ ಪರಿಹಾರ ಕೇಳಿದ್ದರು ಎಂದು ನನಗೆ ಗೊತ್ತಿಲ್ಲ. ಎಷ್ಟು ವಿಸ್ತೀರ್ಣದ ಜಮೀನಿನ ಸಂಬಂಧ ಸದರಿ ದಾವೆಯನ್ನು ಸಲ್ಲಿಸಿದ್ದರು ಎಂದು ನನಗೆ ಗೊತ್ತಿಲ್ಲ. ದಾವ ಜಮೀನನ್ನು ಪ್ರತಿವಾದಿಯ ತಂದೆ ರಾಮೇಗೌಡ ರವರು ನನ್ನ ತಂದೆಯಿಂದ ಅಕ್ರಮವಾಗಿ ಕ್ರಯಪತ್ರ ಬರೆಸಿಕೊಳ್ಳುವ ಮೂಲಕ ಪಡೆದಿದ್ದಾರೆ. ಸದರಿ ಕ್ರಯಪತ್ರವನ್ನು ನನ್ನ ತಂದೆಯ ಜೀವಿತ ಕಾಲದಲ್ಲಿ ಪ್ರಶ್ನೆ ಮಾಡಲಾಗಿಲ್ಲ. ನನ್ನ ಮೊದಲನೇ ಅಣ್ಣನಿಗೆ ಈಗ 60 ವರ್ಷ ವಯಸ್ಸಾಗಿದೆ. ದಾವ ಜಮೀನಿನ ಸಂಬಂಧ ಪ್ರತಿವಾದಿಯ ತಂದೆ ಹೆಸರಿಗೆ ಹಾಗೂ ಆನಂತರ ಪ್ರತಿವಾದಿಯ ಹೆಸರಿಗೆ ಖಾತೆ ಆಗಿರುವುದನ್ನು ನನ್ನ ಸಹೋದರ ಅಥವಾ ಸಹೋದರಿಯರು ಪ್ರಶ್ನೆ ಮಾಡಿದ್ದಾರ ಎಂದು ನನಗೆ ಗೊತ್ತಿಲ್ಲ. ಈಗ ನೋಡುತ್ತಿರುವ ನಿಪಿ-2 ರ ಪ್ರಕಾರ ದಾವ ಜಮೀನಿನ ಖಾತಾ ನಂ.70 ಎಂದರೆ ಸರಿ. ನಿಪಿ-11 ಮತ್ತು 12 ಖಾತೆ ನಂ.60 ಕ್ಕೆ ಸಂಬಂಧಪಟ್ಟಂತೆ ಕಂದಾಯ ಪಾವತಿಸಿರುವ ರಶೀದಿಗಳು ಎಂದರೆ ಸರಿಯಲ್ಲ.

ದಾವ ಸರ್ವೇ ನಂಬರ್ ನಲ್ಲಿ ಮನೆ ಇರುವ ಸಂಬಂಧ ದಾಖಲೆಯನ್ನು ಹಾಜರುಪಡಿಸಿದ್ದೇನೆ. ನಾನು ಹಾಜರುಪಡಿಸಿರುವ ಯಾವುದೇ ದಾಖಲೆಗಳು ದಾವ ಜಮೀನಿನಲ್ಲಿರುವ ಮನೆಗೆ ಸಂಬಂಧಪಟ್ಟದ್ದಲ್ಲ ಎಂದರೆ ಸರಿಯಲ್ಲ. ನನ್ನ ತಂದೆ ನಿಪಿ-21 ರಂತೆ ಸಲ್ಲಿಸಿದ್ದ ದಾವೆ ವಜಾ ಆಗಿದೆ ಎಂದರೆ ನನಗೆ ಗೊತ್ತಿಲ್ಲ. ನಾನು ದಾವ ಸ್ವತ್ತಿಗೆ ಸಂಬಂಧಸಿದಂತೆ ಈ ದಾವೆಯನ್ನು ಮೊದಲು ದಾಖಲಿಸಿ ನಂತರ ಮಾನ್ಯ ಹಿರಿಯ ಸಿವಿಲ್ ನ್ಯಾಯಾಲಯದಲ್ಲಿ ಮತ್ತೊಂದು ದಾವೆಯನ್ನು ದಾಖಲಿಸಿದ್ದೇನೆ. ದಾವ ಜಮೀನಿನ ಖಾತೆಯು ರಾಮೇಗೌಡ ರವರು ಸದರಿ ಜಮೀನನ್ನು ಖರೀದಿ ಮಾಡಿದ ದಿನಾಂಕದಿಂದ ಅವರು ಮೃತರಾದ ದಿನದ ವರೆಗೂ ಸದರಿರವರ ಹೆಸರಿನಲ್ಲಿ ಇತ್ತು ಎಂದರೆ ಸರಿ. ದಾವ ಜಮೀನಿನ ಖಾತೆಯು ಪ್ರತಿವಾದಿಯ ಹೆಸರಿಗೆ ದಾಖಲಾದ ದಿನಾಂಕದಿಂದಲೂ ಸದರಿ ಜಮೀನಿನಲ್ಲಿನ ಪ್ರತಿವಾದಿಯ ಸ್ವಾಧೀನಕ್ಕೆ ನಾವು ತೊಂದರೆ ಕೊಡುತ್ತಿದ್ದೇವೆ ಎಂದರೆ ಸರಿಯಲ್ಲ.

ನನ್ನ ತಂದೆ ಜೀವಿತ ಕಾಲದಲ್ಲಿ ಅವರು ಸಹಾ ದಾವ ಜಮೀನನ ಸ್ವಾಧೀನಕ್ಕೆ ತೊಂದರೆ ಕೊಟ್ಟ ಬಗ್ಗೆ ಪ್ರತಿವಾದಿಯು ಅ.ದಾ.ಸಂ.74/1997 ರಂತೆ ದಾವ ಸಲ್ಲಿಸಿದ್ದರು ಎಂದರೆ ನನಗೆ ಗೊತ್ತಿಲ್ಲ. ಸದರಿ ದಾವೆಯಲ್ಲಿ ನನ್ನ ತಂದೆಯ ವಿರುದ್ಧ ಪ್ರತಿಬಂಧಕಾಜ್ಞೆ ಇದೆ ಎಂದರೆ ನನಗೆ ಗೊತ್ತಿಲ್ಲ. ಈ ವಿಚಾರ ನನಗೆ ಗೊತ್ತಿದ್ದರೂ ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ದಾವ ಜಮೀನಿನಲ್ಲಿ ಇರುವ ಮನೆಯಲ್ಲಿ ನಾನು ಮತ್ತು ಇತರೆ ವಾದಿಗಳು ಪ್ರತಿವಾದಿಯ ಅನುಮತಿಯ ಮೇರೆಗೆ ಸ್ವಾಧೀನದಲ್ಲಿ ಇದ್ದರೂ ಸಹಾ ನಮ್ಮ ಸ್ವಂತ ಹಕ್ಕಿನಿಂದ ಸ್ವಾಧೀನದಲ್ಲಿ ಇದ್ದೇವೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ದಾವ ಜಮೀನಿನಲ್ಲಿ ಇರುವ ಮನೆಯನ್ನು ಪ್ರತಿವಾದಿ ತನ್ನ ತೋಟದ ಕೆಲಸದವರ ವಾಸಕ್ಕಾಗಿ ನಿರ್ಮಿಸಿದ್ದಾರೆ ಎಂದರೆ ಸರಿಯಲ್ಲ. ಆ ಮನೆಯನ್ನು ನಾವು ಕೆಡವಲು ಪ್ರಯತ್ನಿಸಿದ್ದಾಗ ಪ್ರತಿವಾದಿಯ ಗಂಡ ನಮ್ಮ ವಿರುದ್ಧ ಬಾಳೂರು ಪೋಲಿಸ್ ಠಾಣೆಯಲ್ಲಿ ದೂರು ಕೊಟ್ಟಿದ್ದರು ಎಂದರೆ ಸರಿಯಲ್ಲ. ಸದರಿ ದೂರಿನ ನಕಲು ಮತ್ತು ನಾನು ಪೋಲಿಸರ ಮುಂದೆ ಹೇಳಿದ ಹೇಳಿಕೆಯ ನಕಲನ್ನು ಹಿರಿಯ

ಸಿವಿಲ್ ನ್ಯಾಯಾಲಯದಲ್ಲಿ ಇರುವ ಅ.ದಾ.ಸಂ.50/2023 ರಲ್ಲಿ ನಾನೇ ಹಾಜರುಪಡಿಸಿದ್ದೆ ಎಂದರೆ ಸರಿಯಲ್ಲ. ದಾವ ಜಮೀನಲ್ಲಿ ಇರುವ ಮನೆಯನ್ನು ಖಾಲಿ ಮಾಡುವಂತೆ ಪ್ರತಿವಾದಿ ಹೇಳಿದ್ದ ಕಾರಣ ನಾವು ಈ ದಾವೆಯನ್ನು ಸಲ್ಲಿಸಿದ್ದೇವೆ ಎಂದರೆ ಸರಿಯಲ್ಲ.

ದಾವ ಜಮೀನ ವಿಸ್ತೀಣದ ಪೈಕಿ 2 ಗುಂಟೆ ರಸ್ತೆ ಕರಾಬು ವಿಸ್ತೀರ್ಣ ಇದೆ. ಆ ರಸ್ತೆ ದಾವ ಜಮೀನಿನ ಪೂರ್ವ ದಿಕ್ಕಿಗೆ ಇದೆ. ಈ ವಿಚಾರವನ್ನು ವಾದಪತ್ರದಲ್ಲಿ ತಿಳಿಸಲಾಗಿದೆ. ನಿಪಿ-21 ರಲ್ಲಿನ ದಾವೆಯಲ್ಲಿ ನನ್ನ ತಂದೆ ದಾವ ಜಮೀನಿನ ವಿಸ್ತೀರ್ಣದ ಪೈಕಿ 26 ಗುಂಟೆ ಕರಾಬು ವಿಸ್ತೀರ್ಣ ಎಂದು ನಮೂದಿಸಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ದಾವ ಜಮೀನನಲ್ಲಿನ ಮನೆಯಲ್ಲಿ ನಾವು ಪ್ರತಿವಾದಿಯ ಅನುಮತಿ ಮೇರೆಗೆ ಸ್ವಾಧೀನ ಇರುವುದನ್ನು ಹೊರತುಪಡಿಸಿ ಉಳಿದ ವಿಸ್ತೀರ್ಣದಲ್ಲಿ ಪ್ರತಿವಾದಿಯೇ ಸ್ವಾಧೀನದಲ್ಲಿ ಇದ್ದು ಕೃಷಿ ಮಾಡುತ್ತಿದ್ದಾರೆ ಎಂದರೆ ಸರಿಯಲ್ಲ. ಸದರಿ ಮನೆಯನ್ನು ಖಾಲಿ ಮಾಡಿ ಪ್ರತಿವಾದಿಯ ಸ್ವಾಧೀನಕ್ಕೆ ಬಿಟ್ಟುಕೊಡಲು ನಾನು ಮತ್ತು ಇತರೆ ವಾದಿಗಳು ಬಾಧ್ಯಸ್ತರು ಎಂದರೆ ಸರಿಯಲ್ಲ. ನಾನು ಪ್ರತಿವಾದಿ ಹಾಗೂ ಪ್ರತಿವಾದಿಯ ತಂದೆಯ ಹೆಸರಿಗೆ ಇದ್ದ ದಾವ ಜಮೀನಿನ ಖಾತೆಯ ಸಂಬಂಧ ಮೇಲ್ಮನವಿ ಸಲ್ಲಿಸಿಲ್ಲ. ದಾವ ಜಮೀನಿನ ಖಾತೆಯನ್ನು ನಮ್ಮ ಹೆಸರಿಗೆ ಜಂಟಿಯಾಗಿ ಮಾಡಿಕೊಡುವಂತೆ ಕೋರಿ ತಹಶೀಲ್ದಾರ್ ರವರಿಗೆ ನಾವು ಯಾವುದೇ ಅರ್ಜಿ ಸಲ್ಲಿಸಿಲ್ಲ. ದಾವ ಜಮೀನಿನ ಮೇಲೆ ನಮಗೆ ಯಾವುದೇ ರೀತಿಯ ಹಕ್ಕು ಇಲ್ಲ ಎಂದರೆ ಸರಿಯಲ್ಲ. ಈ ದಾವೆಯಲ್ಲಿ ಕೇಳಿರುವ ಪರಿಹಾರ ಪಡೆಯಲು ನಾವು ಅರ್ಹರಲ್ಲ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿ ಮುದ್ರಿಸಲಾಯಿತು)

ಓ ಹೇ ಕೇ ಸ ಇ ಎ ಒ.,

ಸಹಿ/-

ಸಾಕ್ಷಿ ಸಹಿಃ

ಪ್ರಧಾನ ಸಿವಿಲ್ ಜಡ್ಜ್ ಮತ್ತು ಪ್ರದನ್ಯಾಧಂ.,
ಮೂಡಿಗೆರೆ.